# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
# UNIVERSITY OF HORTICULTURAL SCIENCES, BAGALKOT

ದಿನಾಂಕ 15-10-2018 ರಂದು ಮಧ್ಯಾಹ್ನ 2:00 ಗಂಟೆಗೆ ಕೊಠಡಿ ಸಂ. 252, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇಲ್ಲಿ ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 47ನೇ ಸಭೆಯ ನಡುವಳಿಗಳು

**MINUTES OF 47TH MEETING OF THE BOARD OF MANAGEMENT HELD ON 15-10-2018 AT 2.00 PM IN ROOM NO. 252, M. S. BUILDING, BENGALURU**

ಹಾಜರಾದ ಸದಸ್ಯರು

**MEMBERS PRESENT**

| | | | |
|---|---|---|---|
| 1. | ಡಾ. ಕೆ. ಎಂ. ಇಂದಿರೇಶ<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ. | : | ಅಧ್ಯಕ್ಷರು |
| | **Dr. K. M. Indiresh**<br>Vice-Chancellor and Chairman<br>Board of Management,<br>UHS, Bagalkot. | : | Chairman |
| 2. | ಶ್ರೀ ಎಂ. ಮಹೇಶ್ವರ್ ರಾವ್, ಭಾ.ಆ.ಸೇ.<br>ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಹಾಗೂ ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ, ತೋಟಗಾರಿಕೆ ಇಲಾಖೆ, ಎಂ. ಎಸ್. ಬಿಲ್ಡಿಂಗ್, ಬೆಂಗಳೂರು-560 001. | : | ಸದಸ್ಯರು |
| | **Sri. M. Maheshwar Rao, IAS**<br>Secretary to GOK and Member,<br>Board of Management, UHS, Bagalkot,<br>Dept. of Horticulture, M.S.Building,<br>Bengaluru-560001. | : | Member |
| 3. | ಶ್ರೀಮತಿ ಪದ್ಮಾವತಿ<br>ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಪ್ರತಿನಿಧಿಗಳು ಮತ್ತು ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ,ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು-560 001. | : | ಸದಸ್ಯರು |
| | **Mrs. Padmavathi**<br>Additional Secretary to GOK, Dept. of Finance<br>Representative of Principal Secretary GOK and Member, Board of Management, UHS, Bagalkot,<br>Department of Finance, M.S.Building,<br>Bengaluru-560001. | : | Member |

| | | | |
|---|---|---|---|
| 4. | ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ<br>ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೂಪಲ್ಲಿ ಗ್ರಾಮ, ಜೆ. ತಿಮ್ಮಸಂದ್ರ ಪೋಸ್ಟ್<br>ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | : | ಸದಸ್ಯರು |
| | **Sri R. Chowda Reddy Thoopalli**<br>Member of Legislative Council and Member<br>Board of Management, UHS, Bagalkot<br>Tupalli Village, J. Timmasandra Post<br>Srinivaspur Taluka, Kolar District. | : | Member |
| 5. | **ಡಾ. ವೈ. ಎಸ್. ಪಾಟೀಲ**<br>ತೋಟಗಾರಿಕೆ ನಿರ್ದೇಶಕರು ಹಾಗೂ ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ, ತೋಟಗಾರಿಕೆ ಇಲಾಖೆ, ಲಾಲಬಾಗ್, ಬೆಂಗಳೂರು-560004. | : | ಸದಸ್ಯರು |
| | **Dr. Y. S. Patil**<br>Director of Horticulture, Dept. of Horticulture, GOK and Member, Board of Management, UHS Bagalkot,Dept. of Horticulture, Lalbagh, Bangalore 560004. | : | Member |
| 6. | **ಡಾ. ಎನ್. ರಾಜೇಶ್ವರಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 36, ಬೇವುಬೆಲ್ಲ, 1ನೇ ಕ್ರಾಸ್, ವಿದ್ಯಾನಗರ,<br>ಶಿವಮೊಗ್ಗ-577203. | : | ಸದಸ್ಯರು |
| | **Dr. N. Rajeshwari**<br>Member, Board of Management, UHS, Bagalkot<br>No. 36, Bevubella, 1st Cross, Vidyanagara,<br>Shivamogga-577203. | : | Member |
| 7. | **ಶ್ರೀ ಶಂಕರಪ್ಪ ಬಸಪ್ಪ ಮಳಲಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮು:ಪೋ: ಉತ್ತೂರು, ತಾ: ಮುಧೋಳ, ಜಿ: ಬಾಗಲಕೋಟ | : | ಸದಸ್ಯರು |
| | **Sri. Shankarappa Basappa Malali**<br>Member, Board of Management, UHS, Bagalkot<br>Mu:Po: Utturu, Mudhol Taluka, Dist: Bagalkot | : | Member |
| 8. | **ಶ್ರೀ ಎಸ್. ಎನ್. ಮಂಜುನಾಥಗೌಡ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ<br>ದಳಸನೂರು, ಮದನಹಳ್ಳಿ ಪಂಚಾಯಿತು-563126, ತಾಲ್ಲೂಕು ಮತ್ತು<br>ಜಿಲ್ಲೆ: ಕೋಲಾರ. | : | ಸದಸ್ಯರು |
| | **Sri S. N. Manjunathagowda**<br>S/o. Late Nanjappa<br>Member, Board of Management,<br>UHS, Bagalkot<br>Shettymadamangala Village,<br>Velagalaburre Post, Via Dalasanur,<br>Madanahally Panchayath-563126, Tq & Dist :<br>Kolar | : | Member |

| | | | |
|---|---|---|---|
| 9. | **ಶ್ರೀ ಆರ್. ಎಂ. ನಾಗೇಶ್**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 25, ಜುಬಿಲಿ ಶಾಲೆ ಹತ್ತಿರ,<br>ಪಾಪರೆಡ್ಡಿಪಾಳ್ಯ, ನಾಗರಬಾವಿ, ಬೆಂಗಳೂರು-560 072. | : | ಸದಸ್ಯರು |
| | **Sri R. M. Nagesh**<br>Member, Board of Management, UHS, Bagalkot<br>No. 25, Near Jubilee School, Papareddy Palya,<br>Nagarbhavi, Bengaluru-560 072. | : | Member |
| 10. | **ಶ್ರೀ ಯೋಗಿರಾಜ ಬಿ. ಪಾಟೀಲ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 142, "ಸದ್ಗುರು", 5ನೇ ಕ್ರಾಸ್, ಕುಸುಮನಗರ ಮುಖ್ಯ<br>ರಸ್ತೆ, ವೈದ್ಯ ಮಠ ಸಂಕೀರ್ಣ ಹಿಂದುಗಡೆ,<br>ಧಾರವಾಡ-580008. | : | ಸದಸ್ಯರು |
| | **Dr. Yogiraj B. Patil**<br>Member, Board of Management, UHS, Bagalkot<br>No. 142, "Sadguru", 5th Cross<br>Kusumnagar Main Road, Backside of Vaidya<br>Math Complex, Dharwad-580008. | : | Member |
| 11. | **ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶಿವನಗರ, ಸವದತ್ತಿ ರಸ್ತೆ, ಮುರುಘಾ ಮಠದ ಹತ್ತಿರ,<br>ಧಾರವಾಡ – 581208. | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS,<br>Bagalkot, Shivanagar, Savadatti Road,<br>Near Muruga Math,<br>Dharwad-581208. | : | Member |
| 12. | **ಡಾ. ಕೆ. ಎಮ್. ಇಂದಿರೇಶ**<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯರು |
| | **Dr. K. M. Indiresh**<br>Director of Education and Member<br>Board of Management, UHS, Bagalkot | : | Member |
| 13. | **ಡಾ. ಕೆ. ಎನ್. ಕಟ್ಟಿಮನಿ**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ,<br>ಬಾಗಲಕೋಟ | : | ಸದಸ್ಯ ಕಾರ್ಯದರ್ಶಿಗಳು |
| | **Dr. K. N. Kattimani**<br>Registrar & Member-Secretary,<br>Board of Management,<br>Univeristiy of Horticultural Sciences, Bagalkot. | : | Member Secretary |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು ಇವರು ವ್ಯವಸ್ಥಾಪನ ಮಂಡಳಿಯ 47ನೇ ಸಭೆಗೆ ಹಾಜರಾದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಗೌರವಾನ್ವಿತ ಕುಲಪತಿಗಳು ಮತ್ತು ಅಧ್ಯಕ್ಷರು ಇವರು ಕೂಡ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಮುಂದುವರೆದು, ಕುಲಸಚಿವರು ಮತ್ತು ಅಧ್ಯಕ್ಷರು ಇವರು ಸಭೆಗೆ ಮೊದಲ ಬಾರಿಗೆ ಹಾಜರಾದ ನೂತನ ಸದಸ್ಯರಾದ ಡಾ. ಎನ್. ರಾಜೇಶ್ವರಿ ಇವರಿಗೆ ಹೂಗುಚ್ಛ ನೀಡುವ ಮೂಲಕ ಸ್ವಾಗತಿಸಿದರು. ಕುಲಸಚಿವರು ಇವರು ಗೌರವಾನ್ವಿತ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳ ಮೇಲೆ ಸುದೀರ್ಘ ಚರ್ಚೆಗಳನ್ನು ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary welcomed members of the Board of Management to the 47th meeting. Hon'ble Vice Chancellor and Chairman also welcomed all the members. Further, the Chairman welcomed the Dr. N. Rajeshwari new member by offering the flower bouquet who has attended the meeting for the first time. The Registrar requested the Hon'ble Vice Chancellor and Chairman to chair the meeting and to conduct the deliberations as per the agenda for discussion. After the detailed deliberations and discussions on the agenda subjects, the following decisions were resolved during the Board meeting.

| | |
|---|---|
| ಕಾರ್ಯಸೂಚಿ ಸಂಖ್ಯೆ 1 | **ದಿನಾಂಕ 4.6.2018 ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 45ನೇ (ತುರ್ತು) ಸಭೆಯ ನಡುವಳಿಗಳ ದೃಢೀಕರಣ.** |
| | **ಚರ್ಚೆ ಮತ್ತು ಠರಾವು :**<br>ವ್ಯವಸ್ಥಾಪನಾ ಮಂಡಳಿಯ 45ನೇ (ತುರ್ತು) ಸಭೆಯ ನಡುವಳಿಗಳ ಮೇಲೆ ನಿಗದಿಪಡಿಸಿದ ದಿನಾಂಕದೊಳಗೆ ಯಾವುದೇ ಸದಸ್ಯರಿಂದ ಸಲಹೆಗಳು/ಟಿಪ್ಪಣಿಗಳು ಸ್ವೀಕೃತವಾಗದ ಕಾರಣ, ಸಭೆಯ ನಡುವಳಿಗಳನ್ನು ಅಳವಡಿಸಿಕೊಳ್ಳಲು ದೃಢೀಕರಿಸಲಾಯಿತು. |
| **Item No.1** | **Confirmation of the minutes of the 45th (Emergent) meeting of the Board of Management held on 04.06.2018.** |
| | **Discussion and Resolution :**<br>As there were no comments received from any of the members within the stipulated date, the minutes of the 45th (Emergent) meeting of Board of Management were confirmed for adoption. |
| ಕಾರ್ಯಸೂಚಿ ಸಂ.2 | **ದಿನಾಂಕ 4-6-2018 ರಂದು ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 45ನೇ (ತುರ್ತು) ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ.** |
| | **ಚರ್ಚೆ ಮತ್ತು ಠರಾವು :**<br>ವ್ಯವಸ್ಥಾಪನಾ ಮಂಡಳಿಯ 45ನೇ (ತುರ್ತು) ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಅವಲೋಕಿಸಿತು ಮತ್ತು ಅದರ ಪ್ರಗತಿಗೆ ಮಂಡಳಿಯು ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿತು. ಕೈಗೊಂಡ ಕ್ರಮಗಳಿಗೆ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು. |

| | |
|---|---|
| **Item No.2** | **Action taken report on the minutes of the 45th (Emergent) meeting of Board of Management held on 04.06.2018.** |
| | **Discussion and Resolution :**<br>The Board perused the action taken report and expressed its consent over the progress made. The Board accorded its approval for the actions taken. |
| ಕಾರ್ಯಸೂಚಿ ಸಂ.3 | ದಿನಾಂಕ 27.6.2018 ರಂದು ಜರುಗಿದ 46ನೇ ವ್ಯವಸ್ಥಾಪನ ಮಂಡಳಿಯ ಸಭೆಯ ನಡುವಳಿಗಳ ಧೃಢೀಕರಣ. |
| | ಚರ್ಚೆ ಮತ್ತು ಠರಾವು:<br>ಮಂಡಳಿಯು ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ನಂತರ ಈ ಕೆಳಗಿನಂತೆ ತನ್ನ ಅನುಮೋದನೆಯನ್ನು ನೀಡಿತು.<br>1. ಸಿ.ಎ.ಎಸ್.–2006ರ ಅಡಿಯಲ್ಲಿ ಪದೋನ್ನತಿಗಾಗಿ ನಿಗಧಿಪಡಿಸಿದ ರಿಫ್ರೇಶರ್ ಕೋರ್ಸ್‌ನ್ನು ಮೌಲ್ಯಮಾಪನ ಅವಧಿಯ ನಂತರ ಪೂರ್ಣಗೊಳಿಸಲು ಶಿಕ್ಷಕರಿಗೆ ಒಂದು ವರ್ಷದವರೆಗೆ ವಿನಾಯಿತಿ ನೀಡುವ ಕುರಿತು.<br>2. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಸಂಭಾವನೆ ಪರಿಷ್ಕರಿಸುವ ಕುರಿತು.<br>ಮುಂದುವರೆದು, ಈ ಮೇಲಿನ ಕಾರ್ಯಸೂಚಿಗಳಿಗೆ ಸಂಬಂಧಿಸಿದಂತೆ, ದಿನಾಂಕ 27.6.2018 ರಂದು ಜರುಗಿದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 46ನೇ ಸಭೆಯ ನಡುವಳಿಗಳ ಪ್ರಕಾರ ಅಧಿಸೂಚನೆ/ಆದೇಶಗಳನ್ನು ಹೊರಡಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ: ಕುಲಸಚಿವರು) |
| **Item No.3** | **Confirmation of the Proceedings of the 46th meeting of the Board of Management held on 27.6.2018.** |
| | **Discussion and Resolution :**<br>The Board discussed the subject at length and accorded its approval for the following.<br>1. To provide one year relaxation to the teachers for completion of refresher courses under CAS-2006 for promotion from one AGP to another.<br>2. To revise the remuneration to the contract teachers engaged in the University of Horticultural Sciences, Bagalkot.<br>Further, the Board directed the University to issue notification/orders on the above items as per the minutes of 46th Meeting of Board of Management, UHS, Bagalkot held on 27.6.2018.<br>**(Action: Registrar)** |

| | |
|---|---|
| ಕಾರ್ಯಸೂಚಿ ಸಂ.4 | **ದಿನಾಂಕ 27-6-2018 ರಂದು ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 46ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮ.** |
| | **ಚರ್ಚೆ ಮತ್ತು ಠರಾವು :**<br><br>ದಿನಾಂಕ 27.06.2018 ರಂದು ನಡೆದ 46ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ನಿರ್ಧಾರ / ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮಗಳ ವರದಿಯನ್ನು ಸಭೆಗೆ ಮಂಡಿಸಲಾಯಿತು. ಸುಧೀರ್ಘ ಚರ್ಚೆಯ ನಂತರ, ಮಂಡಳಿಯು ಈ ಕೆಳಗಿನ ಸಲಹೆಗಳೊಂದಿಗೆ, ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ವರದಿಗೆ ತನ್ನ ಅನುಮೋದನೆಯನ್ನು ನೀಡಿತು.<br><br>**ಕಾರ್ಯಸೂಚಿ ಸಂ. 5:** ಮಂಡಳಿಯು ಶಿಕ್ಷಕರ ಪದೋನ್ನತಿಗಾಗಿ ಸಿಎಎಸ್-2006ರ ನಿಯಮ 1.1.1 ಪರಿಷ್ಕರಿಸಿ ವಿಶ್ವವಿದ್ಯಾಲಯವು ದಿನಾಂಕ 07.07.2017 ರಂದು ಹೊರಡಿಸಿದ ಅಧಿಸೂಚನೆ ದಿನಾಂಕ 01.01.2006 ರಿಂದ ಅನ್ವಯವಾಗುವಂತೆ ತಿದ್ದುಪಡಿಗಳ ಸಂಬಂಧಿಸಿದಂತೆ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿತು. ಮುಂದುವರೆದು, ಮಂಡಳಿಯು ದಿನಾಂಕ 3.8.2018 ರಂದು ಜರುಗಿದ ವಿಶ್ವವಿದ್ಯಾಲಯಗಳ ಸಮನ್ವಯ ಸಮಿತಿ ಸಭೆಯ ನಡುವಳಿಗಳ ಪ್ರಕಾರ ಸೂಕ್ತ ಕ್ರಮಕೈಗೊಳ್ಳುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br><br>**(ಕ್ರಮ: ಕುಲಸಚಿವರು)** |
| **Item No.4** | **Action taken report on the Proceedings of the 46th meeting of Board of Management, UHS, Bagalkot held on 27.6.2018.** |
| | **Discussion & Resolution :**<br><br>The action taken report on the minutes of the 46th meeting of Board of Management held on 27.06.2018 were placed before the Board, the Board after detailed deliberations accorded its approval to the action taken report with the following suggestions:<br><br>**Agenda Item No. 5:** Regarding the amendment to the notification issued by the University on 07.07.2017 for promotion of teachers under section 1.1.1 of CAS-2006 regulations with effect from 01.01.2006 is approved by the Board. Further, Board directed the University to take necessary action as per the proceedings of the Inter-University Co-ordination Committee meeting held on 3.8.2018 in this regard.<br><br>**(Action: Registrar)** |

| ಕಾರ್ಯಸೂಚಿ ಸಂ.5 | ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರಿಗೆ ಉನ್ನತೀಕರಿಸಲು ಅನುಮೋದನೆಗಾಗಿ ಕುರಿತು. |
|---|---|
| | **ಚರ್ಚೆ ಮತ್ತು ಠರಾವು :**<br>ಸುದೀರ್ಘ ಚರ್ಚೆಯ ನಂತರ, ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲ ಇವರು ಈ ಕಾರ್ಯಸೂಚಿಗೆ ಕೆಳಗಿನ ಕಾರಣಗಳಿಗಾಗಿ ಆಕ್ಷೇಪ ವ್ಯಕ್ತಪಡಿಸಿದರು.<br>1. ಸಿಎಎಸ್–2006 ರ ಅಡಿಯಲ್ಲಿ ಉನ್ನತೀಕರಿಸಲು ಹೋಮ್ ಸೈನ್ಸ ಸಹಾಯಕ ಪ್ರಾಧ್ಯಾಪಕರು ಸಲ್ಲಿಸಿದ ಬಯೋ–ಡೇಟಾವನ್ನು ಸಂಬಂಧಪಟ್ಟ ಪರಿಣಿತರಿಂದ ಪರೀಕ್ಷಿಸಲಾಗಿರುವುದಿಲ್ಲ.<br>2. ಸಿಎಎಸ್–2006 ರ ಅಡಿಯಲ್ಲಿ ಶಿಕ್ಷಕರನ್ನು ಉನ್ನತೀಕರಿಸಲು ನಾಸ್ ಶ್ರೇಯಾಂಕಿತ ನಿಯತಕಾಲಿಕೆಗಳ ಬದಲಾಗಿ ನಾಸ್ ರೇಟೆಡ್ / ರೆಫರ್ಡ್ ನಿಯತಕಾಲಿಕೆಗಳನ್ನು ವಿಶ್ವವಿದ್ಯಾಲಯವು ಪರಿಗಣಿಸಿದೆ. ತೋವಿವಿ, ಬಾಗಲಕೋಟದ ಪ್ರಸ್ತುತ ನಿಯಮಗಳ ಪ್ರಕಾರ ಪದೋನ್ನತಿ ಪ್ರಕ್ರಿಯೆ ಪೂರ್ಣಗೊಳಿಸಿದೆ ಎಂದು ಅಧ್ಯಕ್ಷರು ಮಂಡಳಿಗೆ ತಿಳಿಸಿದರು. ಸಿಎಎಸ್–2006 ರ ಅಡಿಯಲ್ಲಿ ಶಿಕ್ಷಕರನ್ನು ಉನ್ನತೀಕರಿಸಲು ರೆಫರ್ಡ್ ನಿಯತಕಾಲಿಕೆಗಳನ್ನು ಪರಿಗಣಿಸಲು ಅಧಿಕೃತ ದಾಖಲೆಗಳನ್ನು ಸಲ್ಲಿಸಲು ಸದಸ್ಯರು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿದರು.<br>3. ತೋವಿವಿ, ಬಾಗಲಕೋಟದ ಶಿಕ್ಷಕರನ್ನು ಉನ್ನತೀಕರಿಸಲು ಇರುವ ಸ್ಕೋರ್ ಕಾರ್ಡ್ ರಾಜ್ಯದ ಇತರ ಕೃಷಿ ವಿಶ್ವವಿದ್ಯಾಲಯಗಳ ಪ್ರಕಾರ ಇರುವುದಿಲ್ಲ, ಅದನ್ನು ಪರಿಷ್ಕರಿಸಬೇಕಾಗಿದೆ ಎಂದು ಸಹ ಸದಸ್ಯರು ಮಂಡಳಿಯಲ್ಲಿ ತಿಳಿಸಿದರು. ಇದಕ್ಕೆ ಪ್ರಧಾನ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಅನುಮೋದಿಸಿದ ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಸ್ಕೋರ್ ಕಾರ್ಡ್‌ಗಳ ಪ್ರಕಾರ ವಿಶ್ವವಿದ್ಯಾಲಯವು ಪದೋನ್ನತಿ ಪ್ರಕ್ರಿಯೆಯನ್ನು ಈಗಾಗಲೇ ಪೂರ್ಣಗೊಳಿಸಿದೆ, ಅದನ್ನು ಅನುಮೋದಿಸಬಹುದಾಗಿದೆ ಎಂದು ಮಂಡಳಿಗೆ ತಿಳಿಸಿದರು. ವಿವರವಾದ ಚರ್ಚೆಗಳ ನಂತರ, ಮಂಡಳಿಯು ಸಿಎಎಸ್–2006 ರ ಅಡಿಯಲ್ಲಿ ಶಿಕ್ಷಕರನ್ನು ಉನ್ನತೀಕರಿಸಲು ಈ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ಸಲಹೆ ನೀಡಿತು. ಆದಾಗ್ಯೂ, ಮಂಡಳಿಯು ರಾಜ್ಯದ ಎಲ್ಲ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಸ್ಕೋರ್ ಕಾರ್ಡ್ ಅಂತಿಮಗೊಳಿಸಲು ಮುಂಬರುವ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಸಮನ್ವಯ ಸಮಿತಿ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಲು ಸಲಹೆ ನೀಡಿತು.<br>4. ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲ ಇವರು ಸಿಎಎಸ್ ಅಡಿಯಲ್ಲಿ ಶಿಕ್ಷಕರ ಪದೋನ್ನತಿಗಾಗಿ ಅರ್ಹತಾ ದಿನಾಂಕವನ್ನು ಪರಿಗಣಿಸಲು ಸ್ಪಷ್ಟೀಕರಣವನ್ನು ಕೋರಿದರು. ಇದಕ್ಕೆ ಅದ್ಯಕ್ಷರು ಸಿಎಎಸ್–2006 ರ ಅಡಿಯಲ್ಲಿ ಶಿಕ್ಷಕರನ್ನು ಉನ್ನತೀಕರಿಸಲು ವಿಶ್ವವಿದ್ಯಾಲಯವು ಮಾರ್ಗಸೂಚಿಯ ಸಂ. 1.2.14 ನಿಯಮಗಳ ಪ್ರಕಾರ ಶಿಕ್ಷಕರ ಅರ್ಹತಾ ದಿನಾಂಕವನ್ನು ಪರಿಗಣಿಸುತ್ತಿದೆ ಎಂದು ವಿವರಿಸಿದರು.<br>ಮುಂದುವರೆದು, ಮಂಡಳಿಯು ಆಯ್ಕೆ ಸಮಿತಿ / ಪರಿಶೀಲನಾ–ವ–ಮೌಲ್ಯಮಾಪನ ಸಮಿತಿಗಳ ಶಿಫಾರಸ್ಸುಗಳನ್ನು ಮುಂದಿನ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲು ನಿರ್ದೇಶನ ನೀಡಿತು.<br>**(ಕ್ರಮ : ಕುಲಸಚಿವರು)** |

| Item No.5 | Approval for Up-gradation of teachers under CAS-2006 Scheme – reg. |
|---|---|
| | **Discussion & Resolution :**<br>After detailed deliberations, Dr. Y. B. Patil, Hon'ble Member has objected to this item with the following reasons;<br>1. Bio-data submitted by the Assistant Professor of Home Science for promotion under CAS-2006 is not scrutinized by the concerned discipline expert.<br>2. The University has considered the NAAS rated / referred journals instead of NAAS rated journals for promotion of teachers under CAS-2006. The Chairman informed the Board that, the promotion process was completed as per the existing regulations of UHS Bagalkot. The member directed the University to submit the authentic documents for having considered the referred journals for promotion of teachers under CAS-2006.<br>3. The Member also apprised the Board that, the Score Card for promotion of teachers at UHS Bagalkot is not in line with other farm Universities, which needs to be revised. The Principal Secretary and Chairman informed the Board that, the promotion process was already completed by the University as per the existing score card approved by the Board of Management, same may be approved. After detailed deliberations the Board suggested to place this item to the next meeting for approval to the promotion of teachers under CAS-2006. However, the Board also suggested the University to place an item before the forthcoming co-ordination committee meeting of SAU's for finalizing the common score card for all farm Universities of the state in future.<br>4. Hon'ble Member Dr. Y B Patil sought the clarification for considering the eligibility date for CAS promotion of teachers. The Chairman explained the Board that, the University is considering the eligibility date of teachers under promotion as per the clause No.1.2.14 regulations/eligibility for promotion of teachers under CAS-2006.<br>Further, Board directed the University to place recommendations of the selection / screening-cum-evaluation committees in the forthcoming meeting of Board of Management for approval. |

**(Action : Registrar)**

| ಕಾರ್ಯಸೂಚಿ ಸಂ.6 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದಾಲಯ, ಭಾಗಲಕೋಟದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೂರ್ಣ ಕಾಲಿಕ ಸಹಾಯಕ ವೈದ್ಯಾಧಿಕಾರಿಗಳ ಹುದ್ದೆಯ ವೇತನ ಪರಿಷ್ಕರಣೆ ಮಾಡುವ ಕುರಿತು. |
|---|---|

**ಚರ್ಚೆ ಮತ್ತು ಠರಾವು :**

ತೋವಿವಿ, ಬಾಗಲಕೋಟದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೂರ್ಣ ಕಾಲಿಕ ಸಹಾಯಕ ವೈದ್ಯಾಧಿಕಾರಿಗಳಿಗೆ ವೇತನ ಪರಿಷ್ಕರಣೆ ಮಾಡುವ ಕುರಿತ ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿತು. ಸುಧೀರ್ಘ ಚರ್ಚೆಗಳ ನಂತರ, ತೋವಿವಿ, ಬಾಗಲಕೋಟದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೂರ್ಣ ಕಾಲಿಕ ಮತ್ತು ಅರೆಕಾಲಿಕ ಸಹಾಯಕ ವೈದ್ಯಾಧಿಕಾರಿಗಳ ಹುದ್ದೆಯ ವೇತನ ಪಾವತಿಸಲಾಗುತ್ತಿರುವ ಪ್ರಸ್ತುತ ದರವನ್ನು ಈ ಕೆಳಗಿನಂತೆ ಪರಿಷ್ಕರಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು;

| Sl. No. | Category | Revised rates of remuneration |
|---|---|---|
| 1. | Full time (HQ & KRCCH, Arabhavi) | Rs.40000/-P.M. |
| 2. | Part time (College level except KRCCH, Arabhavi) | Rs 20000/- P.M. |

ಮುಂದುವರೆದು, ವಿಶ್ವವಿದ್ಯಾಲಯದಲ್ಲಿ ಈ ಹುದ್ದೆಗಳು ಅವಶ್ಯಕವಾಗಿರುವುದರಿಂದ ಇವುಗಳನ್ನು ಖಾಯಂ ನೇಮಕಾತಿ ಮಾಡಲು ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.

(ಕ್ರಮ : ಕುಲಸಚಿವರು)

| **Item No.6** | **Revision of remuneration to the Assistant Medical Officers working in the UHS, Bagalkot on full-time contractual basis at UHS, Bagalkot.** |
|---|---|

**Discussion & Resolution :**

The Board examined the proposal for revision of remuneration to the Assistant Medical Officers working in the University of Horticultural Sciences, Bagalkot. After detailed deliberations, Board accorded its approval and directed the University to revise the existing rates of remuneration being paid to the full time and proportionately to part time contract Assistant Medical Officers working in UHS, Bagalkot as under ;

| Sl. No. | Category | Revised rates of remuneration |
|---|---|---|
| 1. | Full time (HQ & KRCCH, Arabhavi) | Rs.40000/-P.M. |
| 2. | Part time (College level except KRCCH, Arabhavi) | Rs 20000/- P.M. |

| | |
|---|---|
| | Further, the Board directed to University to take up the process of recruitment of Assistant Medical Officers posts on regular basis as these posts are very essential in the University.<br><br>**(Action : Registrar)** |
| **ಕಾರ್ಯಸೂಚಿ ಸಂ.7** | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಮುಖ್ಯ ಆವರಣದಲ್ಲಿರುವ ಪ್ರೇಕ್ಷಾಗೃಹಕ್ಕೆ ಖುರ್ಚಿ ಹಾಗೂ ಮ್ಯಾಟಿಂಗ್ ಖರೀದಿಸಲು ಅನುಮೋದನೆ ನೀಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಮುಖ್ಯ ಆವರಣದಲ್ಲಿರುವ ಪ್ರೇಕ್ಷಾಗೃಹಕ್ಕೆ ಖುರ್ಚಿ ಹಾಗೂ ಮ್ಯಾಟಿಂಗ್ ಖರೀದಿಸಲು ಅನುಮೋದನೆ ನೀಡುವ ಕುರಿತ ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಮುಖ್ಯ ಆವರಣದಲ್ಲಿರುವ ಪ್ರೇಕ್ಷಾಗೃಹಕ್ಕೆ ಖುರ್ಚಿ ಹಾಗೂ ಮ್ಯಾಟಿಂಗ್ ಖರೀದಿಯ ಅವಶ್ಯಕತೆಯನ್ನು ಪರಿಗಣಿಸಿ, ಮಂಡಳಿಯು ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು ಮತ್ತು ಕಾರ್ಯಸೂಚಿಯಲ್ಲಿ ಮಂಡಿಸಿದಂತೆ ರೂ. 50.75 ಲಕ್ಷಗಳಿಗೆ ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br><br>(ಕ್ರಮ : ಆಸ್ತಿ ಅಧಿಕಾರಿಗಳು) |
| **Item No. 7** | **Approval to invite tender for purchase of chairs and matting to the Auditorium at Main Campus of University of Horticultural Sciences, Bagalkot.** |
| | **Discussion & Resolution :**<br><br>The Board examined the proposal for furnishing chairs and matting to the Auditorium at main campus of University of Horticultural Sciences, Bagalkot. After detailed deliberations and considering the essentiality for furnishing chairs and matting to the Auditorium at Main Campus of University of Horticultural Sciences, Bagalkot, the Board accorded its approval for proposal and directed the University to invite the tenders for Rs. 50.75 lakhs as put up in the agenda as per norms of UHS and KTPP Act.<br><br>**(Action : Estate Officer)** |

| | |
|---|---|
| ಕಾರ್ಯಸೂಚಿ ಸಂ.8 | **ರಾಷ್ಟ್ರೀಯ ತೋಟಗಾರಿಕೆ ಮೇಳವನ್ನು "ಸಮೃದ್ಧಿಗಾಗಿ ತೋಟಗಾರಿಕೆ" ಎಂಬ ಶೀರ್ಷಿಕೆಯ ಮೇಲೆ 2018ರ ಡಿಸೆಂಬರ್ ಮಾಹೆಯಲ್ಲಿ ಆಯೋಜಿಸುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ಸುದೀರ್ಘ ಚರ್ಚೆಯ ನಂತರ, ಮಂಡಳಿಯು ರಾಷ್ಟ್ರೀಯ ತೋಟಗಾರಿಕೆ ಮೇಳವನ್ನು **"ಸಮೃದ್ಧಿಗಾಗಿ ತೋಟಗಾರಿಕೆ"** ಎಂಬ ಶೀರ್ಷಿಕೆಯ ಮೇಲೆ 2018ರ ಡಿಸೆಂಬರ್ ಮಾಹೆಯಲ್ಲಿ ಆಯೋಜಿಸುವ ಕುರಿತ ಪ್ರಸ್ತಾವನೆಗೆ ತನ್ನ ಅನುಮೋದನೆಯನ್ನು ನೀಡಿತು ಮತ್ತು ಆವರ್ತ ನಿಧಿ ಅಡಿಯಲ್ಲಿ ರೂ. 90 ಲಕ್ಷಗಳಿಗೆ ಬಜೆಟರಿ ಅವಕಾಶ ಮಾಡಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. ಮಂಡಳಿಯು ರಾಷ್ಟ್ರೀಯ ತೋಟಗಾರಿಕೆ ಮೇಳವನ್ನು "ಸಮೃದ್ಧಿಗಾಗಿ ತೋಟಗಾರಿಕೆ" ಎಂಬ ಶೀರ್ಷಿಕೆಯಡಿ 2018ರ ಡಿಸೆಂಬರ್ ಮಾಹೆಯಲ್ಲಿ ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. ಮುಂದುವರೆದು, ಮಂಡಳಿಯು ತೋಟಗಾರಿಕೆ ಮೇಳವನನು ದಿನಾಂಕ 23 ರಿಂದ 25ನೇ ಡಿಸೆಂಬರ್, 2018 ರವರೆಗೆ ತೋವಿವಿ, ಬಾಗಲಕೋಟದಲ್ಲಿ ಆಯೋಜಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ : ವಿಸ್ತರಣಾ ನಿರ್ದೇಶಕರು) |
| **Item No.8** | **Organizing national Horticulture Fair-2018 with a theme "Horticulture for Prosperity" during December-2018.** |
| | **Discussion & Resolution :**<br><br>Discussion was held at length, the Board accorded its approval for the proposal and directed the University to make the budgetary provision of Rs. 90 lakhs under revolving fund. The Board directed the University to Organize National Horticulture Fair-2018 with a theme "**Horticulture for Prosperity**" during December-2018. Further, Board directed the University to organize the Horticulture Fair from 23rd to 25th December, 2018 at UHS, Bagalkot.<br><br>**(Action : Director of Extension)** |

| | |
|---|---|
| ಕಾರ್ಯಸೂಚಿ ಸಂ.9 | **ಶ್ರೀ ಮಲ್ಲಿಕಾರ್ಜುನ ಎನ್. ಬಿರಾದಾರ, ಉಪ ಹಣಕಾಸು ನಿಯಂತ್ರಣಾಧಿಕಾರಿಗಳು ಹಾಗೂ ಶ್ರೀಮತಿ ಜಯಶೀಲ, ಹಿರಿಯ ಸಹಾಯಕರು, ತೋವಿವಿ, ಬಾಗಲಕೋಟ (ಕೃವಿವಿ, ರಾಯಚೂರ ನಿಯೋಜನೆ ಮೇರೆಗೆ) ಇವರುಗಳ ನಿಯೋಜನೆಯ ಅವಧಿಯನ್ನು ವಿಸ್ತರಿಸಲು ವಿಶ್ವವಿದ್ಯಾಲಯದಿಂದ ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸುವ ಕುರಿತು.** |
| | ಚರ್ಚೆ ಮತ್ತು ಠರಾವು :<br><br>ಮಂಡಳಿಯು ಶ್ರೀ ಮಲ್ಲಿಕಾರ್ಜುನ ಎನ್. ಬಿರಾದಾರ, ಉಪ ಹಣಕಾಸು ನಿಯಂತ್ರಣಾಧಿಕಾರಿಗಳು ಹಾಗೂ ಶ್ರೀಮತಿ ಜಯಶೀಲ, ಹಿರಿಯ ಸಹಾಯಕರು, ತೋವಿವಿ, ಬಾಗಲಕೋಟ (ಕೃವಿವಿ, ರಾಯಚೂರ ನಿಯೋಜನೆ ಮೇರೆಗೆ) ಇವರುಗಳ ನಿಯೋಜನೆಯ ಅವಧಿಯನ್ನು ದಿನಾಂಕ 31.03.2019 ರವರೆಗೆ ವಿಸ್ತರಿಸಿ ವಿಶ್ವವಿದ್ಯಾಲಯದಿಂದ ತೆಗೆದುಕೊಂಡ ಕ್ರಮವನ್ನು ಪರಿಶೀಲಿಸಿತು. ವಿವರವಾದ ಚರ್ಚೆಯ ನಂತರ, ಮಂಡಳಿಯು ವಿಶ್ವವಿದ್ಯಾಲಯವು ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸಿತು ಮತ್ತು ಇನ್ನುಮುಂದೆ ಇಂತಹ ನಿಯೋಜನೆಯ ಅವಧಿಯನ್ನು ವಿಸ್ತರಿಸುವ ಮುಂಚೆ ವ್ಯವಸ್ಥಾಪನ ಮಂಡಳಿಯ ಅನುಮೋದನೆಯನ್ನು ಪಡೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ : ಆಡಳಿತಾಧಿಕಾರಿಗಳು) |
| **Item No.9** | **Ratification of action taken by the University for extension of deputation period of Sri. Mallikarjun N. Biradar, Deputy Comptroller and Smt. Jayasheela, Senior Assistant, UHS, Bagalkot (on deputation at UAS, Raichur).** |
| | **Discussion & Resolution :**<br><br>The Board examined the action taken by the university regarding extension of deputation period in respect of Sri. Mallikarjun N. Biradar, Deputy Comptroller and Smt. Jayasheela, Senior Assistant, UHS, Bagalkot up to 31.03.2019 at UAS Raichur. After detailed deliberations, Board ratified the action taken by the University and directed the University not to extend such deputation periods without the prior approval of the Board in future.<br><br>**(Action: Administrative Officer)** |
| ಕಾರ್ಯಸೂಚಿ ಸಂ.10 | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದಾಲಯ, ಬಾಗಲಕೋಟದಲ್ಲಿ ಸಂಭಾವನೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯ ಸಹಾಯಕರಿಗೆ ಗೌರವಧನ ಪರಿಷ್ಕರಣೆ ಕುರಿತು.** |
| | **ಚರ್ಚೆ ಮತ್ತು ಠರಾವು :**<br><br>ತೋಟಗಾರಿಕೆ ವಿಜ್ಞಾನಗಳ ವಿಶ್ವವಿದಾಲಯ, ಬಾಗಲಕೋಟದಲ್ಲಿ ಸಂಭಾವನೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯ ಸಹಾಯಕರಿಗೆ ಗೌರವಧನ ಪರಿಷ್ಕರಣೆ ಕುರಿತ ಪ್ರಸ್ತಾವನೆಯನ್ನು ಮಂಡಳಿಯು ಪರಿಶೀಲಿಸಿತು. ವಿವರವಾದ ಚರ್ಚೆಗಳ ನಂತರ ತನ್ನ ಅನುಮೋದನೆಯನ್ನು ನೀಡಿತು ಮತ್ತು ತೋವಿವಿ, ಬಾಗಲಕೋಟದಲ್ಲಿ ಸಂಭಾವನೆ |

| | |
|---|---|
| | ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯ ಸಹಾಯಕರಿಗೆ ಗೌರವಧನ ಪಾವತಿಸಲಾಗುತ್ತಿರುವ ಪ್ರಸ್ತುತ ದರವನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು: |

| ಅ. ನಂ. | ವಿವರಗಳು | ಪ್ರಸ್ತುತ ಇರುವ ಗೌರವಧನ | ಪರಿಷ್ಕೃತ ಗೌರವಧನ |
|---|---|---|---|
| 1. | ತೋವಿವಿ, ಬಾಗಲಕೋಟದಲ್ಲಿ ಸಂಭಾವನೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯ ಸಹಾಯಕರು | ರೂ. 16000/– (ಪ್ರತಿ ತಿಂಗಳು.) | ರೂ. 20000/– (ಪ್ರತಿ ತಿಂಗಳು.) |

(ಕ್ರಮ : ಕುಲಸಚಿವರು)

| | |
|---|---|
| **Item No.10** | **Proposal for revision of remuneration to the Library Assistants who are working in the UHS, Bagalkot on honorarium basis.** |

**Discussion & Resolution :**

The Board examined the proposal for revision of remuneration to the Library Assistants who are working in the UHS, Bagalkot on honorarium basis. After detailed deliberations, Board accorded its approval and directed the University to revise the existing rates of remuneration being paid to Library Assistants who are working in the UHS, Bagalkot on honorarium basis as under ;

| Sl. No. | Particulars | Existing rates of remuneration | Revised rates of remuneration |
|---|---|---|---|
| 1. | Library Assistants who are working in the UHS, Bagalkot on honorarium basis. | Rs.16000/- (P.M.) | Rs.20000/- (P.M.) |

**(Action: Registrar)**

| | |
|---|---|
| **ಕಾರ್ಯಸೂಚಿ ಸಂ.11** | **ದಿನಾಂಕ 06.09.2018 ರಂದು ಜರುಗಿದ 19ನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.** |

**ಚರ್ಚೆ ಮತ್ತು ಠರಾವು :**

ದಿನಾಂಕ 06.09.2018 ರಂದು ಜರುಗಿದ ಹಣಕಾಸು ಸಮಿತಿಯ 19ನೇ ಸಭೆಯ ನಡುವಳಿಗಳನ್ನು ಮಂಡಳಿಯು ಸುದೀರ್ಘವಾಗಿ ಚರ್ಚಿಸಿ ಸದರಿ ನಡುವಳಿಗಳಿಗೆ ತನ್ನ ಅನುಮೋದನೆ ನೀಡಿತು. ಹಣಕಾಸು ಸಮಿತಿಯ 19ನೇ ಸಭೆಯ ನಡುವಳಿಗಳ ಮೇಲೆ ಕಾರ್ಯಸೂಚಿಗಳ ಅನುಸಾರ ಅನುಸರಣಾ ವರದಿಯನ್ನು ಮುಂಬರುವ ವ್ಯವಸ್ಥಾಪನ ಮಂಡಳಿಯ ಸಭೆಯಲ್ಲಿ ಮತ್ತು ಇನ್ನುಮುಂದೆ ನಡುವಳಿಗಳ ಜೊತೆ ಸಲ್ಲಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)

| | |
|---|---|
| **Item No.11** | **Approval of Proceedings of the 19th meeting of Finance Committee of UHS, Bagalkot held on 06.09.2018.** |
| | **Discussion & Resolution :**<br><br>The Board discussed the subject at length and accorded its approval for the proceedings of the 19th meeting of Finance Committee held on 06.09.2018. The Board directed the University to submit the item wise compliance report on the proceedings of 19th meeting of Finance Committee in the next meeting of Board of Management, UHS, Bagalkot and also in future proceedings.<br><br>**(Action: Comptroller)** |
| **ಕಾರ್ಯಸೂಚಿ ಸಂ.12** | **ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರಿನಲ್ಲಿ ವಿದ್ಯಾರ್ಥಿಗಳ ವಸತಿ ನಿಲಯ ಕಟ್ಟಡದ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ.** |
| **ಕಾರ್ಯಸೂಚಿ ಸಂ.13** | **ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರಿನಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯ ಕಟ್ಟಡದ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br><br>ಮಂಡಳಿಯು ಕಾರ್ಯಸೂಚಿ ಸಂ. 12 & 13 ಗಳನ್ನು ಪರಿಶೀಲಿಸಿತು, ವಿವರವಾದ ಚರ್ಚೆಯ ನಂತರ, ಕರ್ನಾಟಕ ಸರ್ಕಾರವು ರೂ. 10.10 ಕೋಟಿಗಳನ್ನು ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರು (ಹಾವೇರಿ)ಯ ಮುಖ್ಯ ಕಟ್ಟಡಕ್ಕಾಗಿ ಮಂಜೂರು ಮಾಡಿದ್ದು, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯ ವಸತಿನಿಲಯಗಳ ಕಟ್ಟಡ ಕಾಮಗಾರಿಗಾಗಿ ಇಲ್ಲವಾದ್ದರಿಂದ, ಈ ಕಾರ್ಯಸೂಚಿಗಳನ್ನು ಮಂಡಳಿಯಿಂದ ಪರಿಗಣಿಸಲಾಗಿರುವುದಿಲ್ಲ. ಮುಂದುವರೆದು, ಮಂಡಳಿಯು ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರು (ಹಾವೇರಿ)ಯ ಮುಖ್ಯ ಕಟ್ಟಡಕ್ಕಾಗಿ ರೂ. 10.10 ಕೋಟಿಗಳಿಗೆ ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br><br>(ಕ್ರಮ : ಆಸ್ತಿ ಅಧಿಕಾರಿಗಳು) |
| **Item No.12** | **Approval to invite tender for the construction works of Boys' Hostel for College of Horticulture Engineering and Food Technology at Devihosur in Haveri District.** |
| **Item No.13** | **Approval to invite tender for the construction works of Girls' Hostel for College of Horticulture Engineering and Food Technology at Devihosur in Haveri District.** |

| | |
|---|---|
| | **Discussion & Resolution :**<br>The Board examined the agenda items No. 12 & 13, after detailed deliberations, these items were not considered by the Board, as the Government of Karnataka has sanctioned Rs. 10.10 crores for the construction of main building of College of Horticulture Engineering and Food Technology, Devihosur (Haveri) and not for construction of Girls and Boys Hostels. Further, Board directed the University to invite the tenders for construction of main building of College of Horticulture Engineering and Food Technology, Devihosur (Haveri) for Rs 10.10 crores as per norms of UHS and KTPP Act.<br>**(Action: Estate Officer)** |
| ಕಾರ್ಯಸೂಚಿ ಸಂ.14 | **ತೋಟಗಾರಿಕಾ ಮಹಾವಿದ್ಯಾಲಯ, ಮುನಿರಾಬಾದ (ಕೊಪ್ಪಳ)ದಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯದ ಎರಡನೇಯ ಮಹಡಿ ಕಟ್ಟಡದ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ತೋಟಗಾರಿಕಾ ಮಹಾವಿದ್ಯಾಲಯ, ಮುನಿರಾಬಾದ (ಕೊಪ್ಪಳ)ದಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯದ ಎರಡನೇಯ ಮಹಡಿ ಕಟ್ಟಡದ ಕಾಮಗಾರಿಗೆ ಟೆಂಡರ್ ಆಹ್ವಾನಿಸುವ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ ಮತ್ತು ತೋಟಗಾರಿಕಾ ಮಹಾವಿದ್ಯಾಲಯ, ಮುನಿರಾಬಾದ (ಕೊಪ್ಪಳ)ದಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯದ ಎರಡನೇಯ ಮಹಡಿ ಕಟ್ಟಡದ ಅವಶ್ಯಕತೆಯನ್ನು ಪರಿಗಣಿಸಿ, ಸದರಿ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿ ಐಸಿಎಆರ್‌ನ ಅನುದಾನ ಬಳಕೆ ಮಾಡುವಂತೆ ಮತ್ತು ತೋವಿವಿ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಾವಳಿಗಳ ಅನುಸಾರ ಟೆಂಡರ್ ಕರೆಯಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತು.<br>(ಕ್ರಮ : ಆಸ್ತಿ ಅಧಿಕಾರಿಗಳು) |
| **Item No.14** | **Approval to invite tender for the construction works of second floor for Girls' Hostel at College of Horticulture, Munirabad (Koppal).** |
| | **Discussion & Resolution :**<br>The Board examined the proposal for approval to invite tender for the construction works of second floor for Girls' Hostel at College of Horticulture, Munirabad (Koppal). After detailed deliberations and considering the essentiality of construction works of second floor for Girls' Hostel at COH, Munirabad, Board has accorded its approval for the same by utilizing ICAR grants and directed the University to invite the tenders as per norms of UHS and KTPP Act.<br>**(Action: Estate Officer)** |

| | |
|---|---|
| ಕಾರ್ಯಸೂಚಿ ಸಂ.15 | **ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರನ್ನು ಪ್ರಾಧ್ಯಾಪಕರಿಂದ ಪ್ರಾಧ್ಯಾಪಕ (ಹೆಚ್ಎಜಿ)ಗೆ ಉನ್ನತೀಕರಿಸಲು ಅನುಮೋದನೆ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ಸಿ.ಎ.ಎಸ್.2006 ರ ಅಡಿಯಲ್ಲಿ ಶಿಕ್ಷಕರನ್ನು ಪ್ರಾಧ್ಯಾಪಕರಿಂದ ಪ್ರಾಧ್ಯಾಪಕ (ಹೆಚ್ಎಜಿ)ಗೆ ಉನ್ನತೀಕರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿತು. ವಿವರವಾದ ಚರ್ಚೆಯ ನಂತರ, ಹೆಚ್ಎಜಿ ಉನ್ನತೀಕರಿಸಲು ಮಾರ್ಗಸೂಚಿಗಳ ಅಧಿಸೂಚನೆಯನ್ನು ಕೃವಿವಿ, ಧಾರವಾಡದ ಮಾದರಿಯಲ್ಲಿ ಗೆಜೆಟ್‌ನಲ್ಲಿ ಪ್ರತ್ಯೇಕವಾಗಿ ಪ್ರಕಟಿಸಿ ಮುಂಬರುವ ವ್ಯವಸ್ಥಾಪನ ಮಂಡಳಿಯ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>**(ಕ್ರಮ : ಕುಲಸಚಿವರು)** |
| **Item No.15** | **Approval for Up-gradation of teachers from Professor to Professor (HAG) under CAS-2006 Scheme.** |
| | **Discussion & Resolution :**<br>The Board examined the proposal for approval for Up-gradation of teachers from Professor to Professor (HAG) under CAS-2006 Scheme. After detailed deliberations, Board directed the University to publish the notification of guidelines of HAG up-gradation in the Gazette separately in line with UAS, Dharwad and place before the forthcoming meeting of Board of Management for its consideration and approval.<br>**(Action: Registrar)** |
| **ಟೇಬಲ್ ಕಾರ್ಯಸೂಚಿ** | |
| **TABLE AGENDA** | |
| ಕಾರ್ಯಸೂಚಿ ಸಂ.1 | **2016–17ನೇ ಸಾಲಿನಿಂದ ಬಿ. ಎಸ್ಸಿ. (ತೋಟಗಾರಿಕೆ) ಪದವಿ ಕಾರ್ಯಕ್ರಮದ ಹೆಸರನ್ನು ಬಿ.ಎಸ್ಸಿ. (ಹಾನ್ಸ್) ತೋಟಗಾರಿಕೆ ಪದವಿ ಎಂದು ಬದಲಾವಣೆ ಮಾಡುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು 2016–17ನೇ ಸಾಲಿನಿಂದ ಬಿ. ಎಸ್ಸಿ. (ತೋಟಗಾರಿಕೆ) ಪದವಿ ಕಾರ್ಯಕ್ರಮದ ಹೆಸರನ್ನು ಬಿ.ಎಸ್ಸಿ. (ಹಾನ್ಸ್) ತೋಟಗಾರಿಕೆ ಪದವಿ ಎಂದು ಬದಲಾವಣೆ ಮಾಡುವ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ವಿವರವಾದ ಚರ್ಚೆಯ ನಂತರ ಮತ್ತು ದಿನಾಂಕ 12.06.2018 ರಂದು ಜರುಗಿದ ಶೈಕ್ಷಣಿಕ ಪರಿಷತ್ತಿನ ಶಿಫಾರಸ್ಸುಗಳನ್ನು ಪರಿಗಣಿಸಿ, ಮಂಡಳಿಯು ಸದರಿ ಪ್ರಸ್ತಾವನೆಗೆ ತನ್ನ ಅನುಮೋದನೆಯನ್ನು ನೀಡಿತು.<br>**(ಕ್ರಮ : ಕುಲಸಚಿವರು)** |

| | |
|---|---|
| **Item No.1** | **Change of Nomenclature of B.Sc. (Hort.) to B.Sc.(Hons) Horticulture Degree Programme from the Academic Year 2016-17 – reg.** |
| | **Discussion & Resolution :**<br>The Board went through the proposal for changing of Nomenclature of B.Sc. (Hort.) to B.Sc.(Hons) Horticulture Degree Programme from the Academic Year 2016-17. After detailed deliberations and considering the recommendations of the Academic Council meeting held on 12.06.2018, the Board accorded its approval for the same.<br>**(Action: Registrar)** |
| **ಕಾರ್ಯಸೂಚಿ ಸಂ.2** | **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನ ಮಂಡಳಿಯ ಸದಸ್ಯರ ನೆದರಲ್ಯಾಂಡ್ ದೇಶದ ಅಧ್ಯಯನ ಪ್ರವಾಸ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನ ಮಂಡಳಿಯ ಸದಸ್ಯರ ನೆದರಲ್ಯಾಂಡ್ ದೇಶದ ಅಧ್ಯಯನ ಪ್ರವಾಸ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ವಿವರವಾದ ಚರ್ಚೆಯ ನಂತರ, ಮಂಡಳಿಯು ನೆದರ್‌ಲ್ಯಾಂಡಿನಲ್ಲಿರುವ ತೋಟಗಾರಿಕೆ ವಲಯದಲ್ಲಿ ನಿಖರವಾದ ಮತ್ತು ಇನ್ನಿತರ ಮುಂದುವರಿದ ತಂತ್ರಜ್ಞಾನಗಳನ್ನು ಅಧ್ಯಯನ ಮಾಡಲು ಆರು ಜನ ಅಧಿಕಾರೇತರ ಸದಸ್ಯರು ಮತ್ತು ಒಬ್ಬರು ಪ್ರವಾಸ ಲೀಡರ್ (6+1) ನೆದರ್‌ಲ್ಯಾಂಡ್‌ಗೆ 08 ದಿನಗಳ ಅಧ್ಯಯನ ಪ್ರವಾಸವನ್ನು ಜನವರಿ, 2019 ರಲ್ಲಿ ಆಯೋಜಿಸಲು ಮತ್ತು ಈ ಕುರಿತು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. ಮುಂದುವರೆದು, ಮಂಡಳಿಯು ಜೈನ್ ಇರಿಗೇಶನ್ ಸಿಸ್ಟಮ್ ಇವರಿಂದ ಆರ್ಥಿಕ ನೆರವು ಪಡೆಯಲು ಪ್ರಯತ್ನ ಮಾಡುವಂತೆ ಮತ್ತು ಸರ್ಕಾರದ ಅನುಮೋದನೆಯ ನಂತರ ವ್ಯವಸ್ಥೆಗಳನ್ನು ಸಹ ಮಾಡಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>**(ಕ್ರಮ : ವಿಶೇಷಾಧಿಕಾರಿಗಳು, ಕುಲಪತಿಗಳ ಪ್ರಾದೇಶಿಕ ಕಛೇರಿ, ಬೆಂಗಳೂರು)** |
| **Item No.2** | **Study Tour of Members of Board of Management of UHS Bagalkot to Netherland.** |
| | **Discussion & Resolution :**<br>The Board went through the proposal for organizing Study Tour of non-official members of Board of Management, UHS, Bagalkot to Netherland. After detailed deliberations, Board suggested the University to organize a Study Tour to Netherland for six non-official Board members and one Tour Leader (6+1) to study the innovations in precision horticulture and various advanced technologies in horticulture sector in Netherland for 08 days during the month of January, 2019. Further, Board directed the University to submit the proposal to the Government in this |

| | |
|---|---|
| | regard for approval. Further, Board directed the University to make efforts for getting financial assistance from Jain Irrigation System to organize the Study Tour Programme and also suggested to make necessary arrangements by the University after the approval of Government.<br>**(Action: Special Officer, VC's Regional Office, Bengaluru)** |
| ಕಾರ್ಯಸೂಚಿ ಸಂ.3 | ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ 2017-18ನೇ ಸಾಲಿನ ವಾರ್ಷಿಕ ವರದಿ. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ವಿಶ್ವವಿದ್ಯಾಲಯದ 2017-18ನೇ ಸಾಲಿನ ಕರಡು ವಾರ್ಷಿಕ ವರದಿಯನ್ನು ಪರಿಶೀಲಿಸಿತು, ಮಂಡಳಿಯು ಇದನ್ನು ಮುದ್ರಿಸಲು ತನ್ನ ಅನುಮೋದನೆ ನೀಡಿತು. ಮುಂದುವರೆದು, ಮಂಡಳಿಯು ತೋವಿವಿ ಅಧಿನಿಯಮ 2009 ರ ನಿಯಮ 57 ರ ಪ್ರಕಾರ ವಾರ್ಷಿಕ ವರದಿಗಳನ್ನು ಕರ್ನಾಟಕ ಸರಕಾರಕ್ಕೆ ಜರೂರಾಗಿ ಸಲ್ಲಿಸಲು ವಿಶ್ವವಿದ್ಯಾಲಯಕ್ಕೆ ನಿದೇಶಿಸಿತು.<br>(ಕ್ರಮ : ಕುಲಸಚಿವರು/ವಿಸ್ತರಣಾ ನಿರ್ದೇಶಕರು) |
| **Item No.3** | **Annual Report of the University of Horticultural Sciences, Bagalkot for the year 2017-18.** |
| | **Discussion & Resolution :**<br>Board reviewed the draft Annual Report of the University for the year 2017-18, Board accorded its approval for printing the same. Further, the Board directed the University to submit the Annual Reports to the Government of Karnataka as per Sec.57 of UHS Act-2009 at the earliest.<br>**(Action: Registrar/Director of Extension)** |
| ಕಾರ್ಯಸೂಚಿ ಸಂ.4 | ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕ ಹುದ್ದೆಗೆ ಪದೋನ್ನತಿ ಕುರಿತಂತೆ, ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತೋವಿವಿ, ಬಾಗಲಕೋಟೆಯಲ್ಲಿ ಅಳವಡಿಸುವ / ಪದೋನ್ನತಿ ಕುರಿತು. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕ ಹುದ್ದೆಗೆ ಪದೋನ್ನತಿ ಕುರಿತಂತೆ, ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತೋವಿವಿ, ಬಾಗಲಕೋಟೆಯಲ್ಲಿ ಅಳವಡಿಸುವ / ಪದೋನ್ನತಿ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ವಿವರವಾದ ಚರ್ಚೆಗಳ ನಂತರ, ಮಂಡಳಿಯು ತೋವಿವಿ, ಬಾಗಲಕೋಟದಲ್ಲಿ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳು ಇಲ್ಲದಿರುವುದರಿಂದ, ಕೃವಿವಿ, ಧಾರವಾಡದಿಂದ ಅಳವಿಡಿಸಿಕೊಂಡ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿಗಾಗಿ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>(ಕ್ರಮ : ಕುಲಸಚಿವರು) |

| | |
|---|---|
| **Item No.4** | **Approval for amendment to the adopted Cadre and Recruitment Regulations of UAS, Dharwad pertaining to promotion of Library Assistant to Assistant Librarian and according promotions at UHS, Bagalkot.** |
| | **Discussion & Resolution :**<br><br>The Board went through the proposal for amendment to the adopted Cadre and Recruitment Regulations of UAS, Dharwad pertaining to promotion of Library Assistant to Assistant Librarian at UHS, Bagalkot. After detailed deliberations, Board directed the University to submit the proposal to the Government for amendment to the adopted Cadre and Recruitment Regulations of UAS, Dharwad, as there are no modified C & R regulations in UHS, Bagalkot.<br><br>**(Action: Registrar)** |
| ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇನ್ನಿತರ ವಿಷಯಗಳು ಮತ್ತು ಸಲಹೆಗಳು | |
| **Any other items with permission of the Chair and suggestions** | |
| ಕಾರ್ಯಸೂಚಿ ಸಂ.1 | ವಿಶ್ವವಿದ್ಯಾಲಯದ ಕೆಲವು ಬೋಧಕ ಸಿಬ್ಬಂದಿಗಳು ಇತರ ಪ್ರಕಟಿತ ಪುಸ್ತಕಗಳಿಂದ ಪಠ್ಯವನ್ನು ತೆಗೆದುಕೊಳ್ಳುವ ಮೂಲಕ ಪುಸ್ತಕಗಳನ್ನು ಲೇಖಕರು ಎಂದು ಪ್ರಕಟಿಸಿರುವುದನ್ನು ಮಂಡಳಿಯು ಗಮನಿಸಿತು. ಮಂಡಳಿಯು ಪುಸ್ತಕಗಳ ಪ್ರಕಟಿಸುವಾಗ ನಿಯಮಾವಳಿಗಳನ್ನು (copy right) ಉಲ್ಲಂಘನೆ ಮಾಡದಂತೆ ಎಲ್ಲ ಬೋಧಕ ಸಿಬ್ಬಂದಿಗೆ ಕಠಿಣ ಸೂಚನೆಗಳನ್ನು ನೀಡುವಂತೆ ಮತ್ತು ತಪ್ಪಿದಲ್ಲಿ ಈ ಕುರಿತು ಸಂಬಂಧಪಟ್ಟ ಬೋಧಕ ಸಿಬ್ಬಂದಿಗಳ ವಿರುದ್ಧ ಕ್ರಮಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. ಮುಂದುವರೆದು, ಈ ಕುರಿತು ಸುತ್ತೋಲೆಯನ್ನು ಹೊರಡಿಸುವಂತೆ ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br><br>(ಕ್ರಮ : ಆಡಳಿತಾಧಿಕಾರಿಗಳು) |
| **Item No.1** | Board observed that some of the faculty members of the University have published the books as Authors by taking text from other published books. Board directed the University to give instructions strictly to all the faculty members of the University not to violate the rules (copy right) while publishing the books, failing which action will be initiated against the concerned faculty members. Further, the Board directed the University to issue a circular in this regard.<br><br>**(Action: Administrative Officer)** |

| | |
|---|---|
| **ಕಾರ್ಯಸೂಚಿ ಸಂ.2** | ಮಂಡಳಿಯು ತೋಟಗಾರಿಕೆ ಮೇಳ–2018 ರ ಸ್ಟೀರಿಂಗ್ ಸಮಿತಿಯಲ್ಲಿ ಶ್ರೀ ಶಂಕರಪ್ಪ ಬಸಪ್ಪ ಮಳಲಿ, ಗೌರವಾನ್ವಿತ ಸದಸ್ಯರು, ವ್ಯವಸ್ಥಾಪನ ಮಂಡಳಿ, ತೋವಿವಿ, ಬಾಗಲಕೋಟ ಇವರನ್ನು ಸದಸ್ಯರನ್ನಾಗಿ ಸೇರ್ಪಡೆ ಮಾಡಲು ಮತ್ತು ಸಂಬಂಧಪಟ್ಟವರಿಗೆ ಮಾಹಿತಿ ನೀಡುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. **(ಕ್ರಮ : ಕುಲಸಚಿವರು)** |
| **Item No.2** | The Board suggested the University to include Sri Shankarappa Basappa Malali, Hon'ble Member, Board of Management, UHS, Bagalkot in the Steering Committee of Totagarike Mela-2018 of UHS, Bagalkot and intimate the same to the concerned. **(Action: Registrar)** |
| **ಕಾರ್ಯಸೂಚಿ ಸಂ.3** | ಮಂಡಳಿಯು ಕ್ಷೇತ್ರ ಅಭಿವೃದ್ಧಿ ಸಮಿತಿ ಮತ್ತು ಕಾಮಗಾರಿ ಸಮಿತಿಯ ರಚನೆಯ ಅವಶ್ಯಕತೆಯನ್ನು ಪರಿಗಣಿಸಿ, ಈ ಕುರಿತು ಕರ್ನಾಟಕ ಸರಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. **(ಕ್ರಮ: ಕುಲಸಚಿವರು)** |
| **Item No.3** | The Board considering the essentiality of constitution of Farm Development Committee and Works Committee in the University has directed the University to submit the proposal to the Government of Karnataka for approval in this regard. **(Action: Registrar)** |
| **ಕಾರ್ಯಸೂಚಿ ಸಂ.4** | ಮಂಡಳಿಯು ಅಧಿಕಾರಿಗಳ ಜೊತೆ ಡಿಎಲ್‌ಆರ್ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರು (ಲಘು ವಾಹನ) ಮತ್ತು ವಿಶ್ವವಿದ್ಯಾಲಯದ ವಿವಿಧ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಹಾಯಕರು ಇವರುಗಳ ಡಿಎಲ್‌ಆರ್ 26 ದಿನಗಳ ಬದಲಾಗಿ 30 ದಿನಗಳಿಗೆ ವಿಸ್ತರಿಸಲು ಸಲಹೆ ನೀಡಿತು. ಸಂಬಂಧಪಟ್ಟ ಸಿಬ್ಬಂದಿಗಳು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಿದ್ದಕ್ಕಾಗಿ ಆಯಾ ನಿಯಂತ್ರಣಾಧಿಕಾರಿಗಳಿಂದ ಪ್ರಮಾಣ ಪತ್ರವನ್ನು ವೇತನ ಬಿಲ್ಲ ತಯಾರಿಸಲು ಹಾಜರಪಡಿಸುವುದು. **(ಕ್ರಮ: ಆಡಳಿತಾಧಿಕಾರಿಗಳು)** |
| **Item No.4** | It was suggested by the Board that, the DLR rates shall be extended up to 30 days instead of 26 days in respect of all the Drivers (LV) working with Officers of the University and also to the Cooks working in various colleges of the University. The concerned workers have to produce the certificate from their controlling officers for having attended the additional days work for preparing the salary bill. **(Action: Administrative Officer)** |
| **ಕಾರ್ಯಸೂಚಿ ಸಂ.5** | ವಿಶ್ವವಿದ್ಯಾಲಯದ ಕೆಲವು ಕೇಂದ್ರಗಳು/ಮಹಾವಿದ್ಯಾಲಯಗಳಲ್ಲಿ ನರ್ಸರಿ/ನಾಟಿ ಮಾಡುವ ವಸ್ತುಗಳನ್ನು ಮಾರಾಟ/ಪ್ರದರ್ಶನಗಳ ಉದ್ದೇಶಕ್ಕಾಗಿ ಖರೀದಿ ಮಾಡುತ್ತಿರುವ ವಿಷಯವನ್ನು ವ್ಯವಸ್ಥಾಪನ ಮಂಡಳಿ ಸದಸ್ಯರುಗಳು ವ್ಯಕ್ತಪಡಿಸಿದರು. ಸುದೀರ್ಘ ಚರ್ಚೆಯ ನಂತರ, ಮಂಡಳಿಯು ವಿಶ್ವವಿದ್ಯಾಲಯದ ಎಲ್ಲ ಮಹಾವಿದ್ಯಾಲಯ ಮತ್ತು |

| | |
|---|---|
| | ಸಂಶೋಧನಾ ಕೇಂದ್ರಗಳಲ್ಲಿ ನರ್ಸರಿಗಳನ್ನು ಸ್ಥಾಪಿಸಿ, ನರ್ಸರಿ/ನಾಟಿ ಮಾಡುವ ವಸ್ತುಗಳನ್ನು ಉತ್ಪಾದನೆ ಮಾಡುವ ಮೂಲಕ ಆಂತರಿಕ ಆದಾಯವನ್ನು ಹೆಚ್ಚಿಸಲು ಮತ್ತು ರೈತರಿಗೆ ಉತ್ತಮ ಗುಣಮಟ್ಟದ ಸಸಿಗಳನ್ನು ನೀಡುವುದರ ಮೂಲಕ ಇನ್ನೂ ಹೆಚ್ಚಿನ ಆದಾಯವನ್ನು ಪಡೆಯಲು ಪ್ರಯತ್ನಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>**(ಕ್ರಮ: ಸಂಶೋಧನಾ ನಿರ್ದೇಶಕರು)** |
| **Item No.5** | Hon'ble Members expressed that, some of the stations/colleges of the University are purchasing the nursery/planting materials for the purpose of sale/exhibition. After detailed deliberations, Board directed the University to make efforts for production of nursery/planting materials for increasing internal income by establishing nurseries at all the Colleges and Research Stations, for getting more income by providing quality plants to the farmers.<br>**(Action: Director of Research)** |
| **ಕಾರ್ಯಸೂಚಿ ಸಂ.6** | ಮಂಡಳಿಯು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನ ಮಂಡಳಿಯ 06 ಅಧಿಕಾರೇತರ ಸದಸ್ಯರುಗಳಿಗೆ ಮತ್ತು ಓರ್ವ ಪ್ರವಾಸ ಮುಖ್ಯಸ್ಥರನ್ನು ಒಳಗೊಂಡಂತೆ (6+1) ಆಂಧ್ರ ಪ್ರದೇಶ ಮತ್ತು ಓರಿಸ್ಸಾದ ತೋಟಗಾರಿಕೆ ವಲಯದಲ್ಲಿ ನಿಖರವಾದ ಮತ್ತು ಇನ್ನಿತರ ಮುಂದುವರಿದ ತಂತ್ರಜ್ಞಾನಗಳನ್ನು ಅಧ್ಯಯನ ಮಾಡಲು ಅಧ್ಯಯನ ಪ್ರವಾಸವನ್ನು ಜನವರಿ, 2019 ರಲ್ಲಿ ಆಯೋಜಿಸಲು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು. ಮುಂದುವರೆದು, ಮಂಡಳಿಯು ಅಧ್ಯಯನ ಪ್ರವಾಸ ಕಾರ್ಯಕ್ರಮವನ್ನು ಆಯೋಜಿಸಲು ಜೈನ್ ಇರಿಗೇಶನ್ ಸಿಸ್ಟಮ್ ಇವರಿಂದ ಆರ್ಥಿಕ ನೆರವು ಪಡೆಯಲು ಪ್ರಯತ್ನ ಮಾಡಲು ಮತ್ತು ಮುಂಚಿತವಾಗಿಯೇ ಅಗತ್ಯ ವ್ಯವಸ್ಥೆಗಳನ್ನು ಮಾಡಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿತು.<br>**(ಕ್ರಮ: ವಿಶೇಷ ಅಧಿಕಾರಿಗಳು, ಕುಲಪತಿಗಳ ಪ್ರಾದೇಶಿಕ ಕಛೇರಿ, ಬೆಂಗಳೂರು)** |
| **Item No.6** | The Board suggested the University organize the Study Tour of non-official members of Board of Management, UHS, Bagalkot to Andhra Pradesh and Orissa for six non-official Board members and one Tour Leader (6+1) to study the innovations in precision horticulture and various advanced technologies in horticulture sector in Andhra Pradesh and Orissa during the month of January, 2019. Further, Board directed the University to make efforts for getting financial support from Jain Irrigation System to organize the Study Tour Programme to the Board members and also suggested to make necessary arrangements by the University well in advance.<br>**(Action: Special Officer, VC's Regional Office, Bengaluru)** |

| | |
|---|---|
| ಕಾರ್ಯಸೂಚಿ ಸಂ.7 | ಗೌರವಾನ್ವಿತ ಸದಸ್ಯರಾದ ಶ್ರೀ ಆರ್. ಚೌಡಾ ರೆಡ್ಡಿ ತೂಪಲ್ಲಿ ಇವರು ಹೊರಗುತ್ತಿಗೆ ಪದ್ಧತಿಯ ಯೋಜನೆಯನ್ನು ವಿಶ್ವವಿದ್ಯಾಲಯದಲ್ಲಿ ಕೈಬಿಡಲು ಮತ್ತು ಪ್ರಸ್ತುತವಾಗಿ ಜಾರಿಯಲ್ಲಿರುವ ಪದ್ದತಿಯನ್ನು ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಹಿತದೃಷ್ಟಿಯಿಂದ ಮುಂದುವರೆಸುವಂತೆ ಸಲಹೆ ನೀಡಿದರು. ಇದಕ್ಕೆ ಅಧ್ಯಕ್ಷರು ವಿಶ್ವವಿದ್ಯಾಲಯವು ಗುತ್ತಿಗೆ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಸರ್ಕಾರದಿಂದ ಸ್ಪಷ್ಟ ನಿರ್ದೇಶನಗಳನ್ನು ಸ್ವೀಕರಿಸಿರುವುದನ್ನು ಸಭೆಗೆ ತಿಳಿಸಿದರು. |
| **Item No.7** | Sri R. Chowda Reddy Thoopally, Hon'ble Member suggested the University to drop the plan for outsourcing system in the University and to continue the existing system in the interest of the employees working in the University on contractual basis. The chairman informed the Board that, the University has received the clear directions from the Govt. to get the services of contractual employees in the University through outsourcing only. |
| ಕಾರ್ಯಸೂಚಿ ಸಂ.8 | ಗೌರವಾನ್ವಿತ ಸದಸ್ಯರಾದ ಶ್ರೀ ಆರ್. ಎಂ. ನಾಗೇಶ ಇವರು ವಿಶ್ರಾಂತ ಕುಲಪತಿಗಳಾದ ಡಾ. ಡಿ. ಎಲ್. ಮಹೇಶ್ವರ್ ಇವರು ಸರ್ಕಾರದ ಅನುದಾನವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಲ್ಲವೆಂದು ಸಭೆಯಲ್ಲಿ ವ್ಯಕ್ತಪಡಿಸಿದರು. ಅಧ್ಯಕ್ಷರು ಈ ಬಗ್ಗೆ ಏನಾದರೂ ಇದ್ದಲ್ಲಿ ಅವಶ್ಯಕ ದಾಖಲಾತಿಗಳೊಂದಿಗೆ ವರದಿಯನ್ನು ಗೌರವಾನ್ವಿತ ರಾಜ್ಯಪಾಲರ ಕಛೇರಿಗೆ ಲಿಖಿತವಾಗಿ ಸಲ್ಲಿಸಲು ತಿಳಿಸಿದರು. |
| **Item No. 8** | Sri R. M. Nagesh, Hon'ble Member apprised the Board that, the former Vice-Chancellor, Dr. D. L. Maheswar has not utilized the Government funds properly. The Chairman suggested to submit the report along with required documents to the Hon'ble Governor's office in writing, if any. |

ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks.

5/11

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ

**Registrar & Member Secretary**
**Board of Management, UHS, Bagalkot**